### ಪ್ಲಾಸ್ಟಿಕ್ ನಿಷೇಧ ಕುರಿತ ಅನುಷ್ಠಾನ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಹೇಳಿಕೆ

# ಜುಲೈ 1 ರಿಂದ ತುಮಕೂರು ಜಿಲ್ಲೆಯಲ್ಲಿ ಪ್ಲಾಸ್ಟಿಕ್ ನಿಷೇಧ

**ತುಮಕೂರು**

ಪ್ಲಾಸ್ಟಿಕ್‌ನಿಂದ ತಯಾರಿಸಿದ ಕ್ಯಾರಿಬ್ಯಾಗ್, ಬಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಬಾವುಟ, ತಟ್ಟೆ, ಚಮಚ ಸೇರಿದಂತೆ ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ, ಸರಬರಾಜು, ದಾಸ್ತಾನು, ಸಾಗಾಣಿಕೆ, ಮಾರಾಟ ಮತ್ತು ವಿತರಣೆಯನ್ನು ಜುಲೈ 1 ರಿಂದ ತುಮಕೂರು ಜಿಲ್ಲೆಯಲ್ಲಿ ನಿಷೇಧಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಕೆ.ಪಿ. ಮೋಹನ್ ರಾಜ್ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಛೇರಿಯಲ್ಲಿಂದು ಕರೆದಿದ್ದ ಜಿಲ್ಲಾ ಪರಿಸರ ಮಾಲಿನ್ಯ ನಿಯಂತ್ರಣ ಪ್ರಾಧಿಕಾರದಡಿ ಪ್ಲಾಸ್ಟಿಕ್ ನಿಷೇಧ ಕುರಿತ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಈಗಾಗಲೇ ಪ್ಲಾಸ್ಟಿಕ್ ತಯಾರಿಕೆ, ಸರಬರಾಜು, ದಾಸ್ತಾನು, ಸಾಗಾಣಿಕೆ, ಮಾರಾಟ ಮತ್ತು ವಿತರಣೆಯನ್ನು ನಿಷೇಧಿಸಿದೆ. ಆದುದರಿಂದ ಜಿಲ್ಲೆಯಲ್ಲಿ ಬರುವ ಜುಲೈ 1 ರಿಂದ ಪ್ಲಾಸ್ಟಿಕ್‌ನಿಂದ ತಯಾರಿಸಿದ ಕ್ಯಾರಿಬ್ಯಾಗ್, ಬಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಬಾವುಟ, ತಟ್ಟೆ, ಚಮಚ, ಕ್ಲೀಂಗ್‌ಫಿಲ್ಮ್ಸ್, ಊಟದ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ, ಥರ್ಮೋಕೋಲ್, ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್‌ನಿಂದ ತಯಾರಾದ ವಸ್ತುಗಳು, ನಾನ್‌ವೋವೆನ್, ಪಾಲಿಪ್ರಾಪಿಲೆನ್ ನಂತಹ ಪ್ಲಾಸ್ಟಿಕ್ ವಸ್ತುಗಳನ್ನು ಜಿಲ್ಲೆಯಲ್ಲಿ ಸರಬರಾಜು, ದಾಸ್ತಾನು, ಸಾಗಾಣಿಕೆ, ಮಾರಾಟ ಮತ್ತು ವಿತರಣೆಯನ್ನು ಸಂಪೂರ್ಣವಾಗಿ ನಿಷೇಧಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಫ್ಲೆಕ್ಸ್, ಬ್ಯಾನರ್‌ಗಳನ್ನು ಈಗ ಪ್ಲಾಸ್ಟಿಕ್‌ನಿಂದ ತಯಾರಿಸುತ್ತಿದ್ದು, ಮುದ್ರಕರು ಬಟ್ಟೆ ಮತ್ತಿತರೆ ಪರ್ಯಾಯ ವಸ್ತುಗಳ ಮೂಲಕ ಮುದ್ರಿಸಬೇಕಾಗಿದೆ. ಒಂದು ವೇಳೆ ನಿಯಮ ಮೀರಿ ಪ್ಲಾಸ್ಟಿಕ್‌ನಿಂದ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಮುದ್ರಿಸಿದಲ್ಲಿ ಮುದ್ರಣ ಮಾಡಿದವರ ಮೇಲೆ ಹಾಗೂ ಫ್ಲೆಕ್ಸ್ ಮಾಡಿಸಿದವರ ಮೇಲೆ ನಿಯಮಾನುಸಾರ ಪ್ರಕರಣ ದಾಖಲಿಸಲಾಗುವುದು ಎಂದರು.

ಈ ಬಗ್ಗೆ ಸಭೆಯಲ್ಲಿ ಭಾಗವಹಿಸಿದ್ದ ಫ್ಲೆಕ್ಸ್ ಮುದ್ರಕರು ಈಗಿರುವ ಯಂತ್ರಗಳು ಪ್ಲಾಸ್ಟಿಕ್‌ನಿಂದ ಫ್ಲೆಕ್ಸ್ ಮುದ್ರಿಸಲು ಮಾತ್ರ ಸಾಧ್ಯವಾಗುತ್ತದೆ. ಪರ್ಯಾಯವಾಗಿ ಬಟ್ಟೆ ಮತ್ತಿತರ ವಸ್ತುಗಳಿಂದ ಮುದ್ರಿಸಲು ಅಗತ್ಯವಿರುವ ಹೊಸ ಯಂತ್ರವನ್ನು ಖರೀದಿಸಲು ಹಣಕಾಸಿನ ನೆರವು ನೀಡುವಂತೆ ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳಡಿ ಯಂತ್ರ ಖರೀದಿಗೆ ಹಣಕಾಸಿನ ನೆರವು ಒದಗಿಸುವುದಾಗಿ ತಿಳಿಸಿದರು.

ಪ್ಲಾಸ್ಟಿಕ್ ವಸ್ತುಗಳ ಮಾರಾಟ, ತಯಾರಿಕೆ, ದಾಸ್ತಾನು ಹಾಗೂ ವಿತರಣೆಯನ್ನು ಮಾಡುವುದು ಕಂಡು ಬಂದಲ್ಲಿ ಮೊದಲ ಬಾರಿ ಅವರಿಗೆ ನಿಷೇಧದ ಬಗ್ಗೆ ಹಾಗೂ ಕಾನೂನಿನಲ್ಲಿರುವ ನಿರ್ಬಂಧಗಳ ಬಗ್ಗೆ ಮಾಹಿತಿ ನೀಡಿ ವಿನಾಯತಿ ನೀಡುವುದರ ಬಗ್ಗೆ ಸಭೆಯಲ್ಲಿ ಪ್ಲಾಸ್ಟಿಕ್ ಫ್ಲೆಕ್ಸ್ ತಯಾರಕರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿದ ಜಿಲ್ಲಾಧಿಕಾರಿಗಳು, ಮೊದಲ ಬಾರಿ ಸಿಕ್ಕಿ ಬೀಳುವವರಿಗೆ ವಿನಾಯತಿ ನೀಡುವುದು ಸೂಕ್ತ. ನಂತರ ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಅಧಿಕಾರಿಗಳಿಗೆ ಹೇಳಿದರು.

ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಹಾಗೂ ಮನುಷ್ಯನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀಳಲಿದೆ. ಹೀಗಾಗಿ ಪ್ಲಾಸ್ಟಿಕ್‌ನ್ನು ಜಿಲ್ಲೆಯಲ್ಲಿ ನಿಷೇಧಿಸಲಾಗುತ್ತಿದೆ. ಈಗಾಗಲೇ ಪಾಲಿಕೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಬಳಸುತ್ತಿರುವವರ ಅಂಗಡಿ, ಸಗಟು ಮಾರಾಟಗಾರರ ವಿರುದ್ಧ ಕಾರ್ಯಾಚರಣೆ ನಡೆಸಿ ದಂಡವನ್ನು ವಸೂಲಿ ಮಾಡಿದ್ದಾರೆ. ಆದರೂ ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಬಳಕೆ ನಿಂತಿಲ್ಲ, ಆದುದರಿಂದ ಜುಲೈ 1 ರಿಂದ ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲು ತೀರ್ಮಾನಿಸಲಾಗಿದೆ ಎಂದು ಅವರು ಹೇಳಿದರು.

ಸಾರ್ವಜನಿಕರು ಜುಲೈ 1 ರಿಂದ ಪ್ಲಾಸ್ಟಿಕ್‌ನಿಂದ ತಯಾರಿಸಿದ ಕ್ಯಾರಿಬ್ಯಾಗ್, ಬಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಬಾವುಟ, ತಟ್ಟೆ, ಚಮಚ, ಕ್ಲೀಂಗ್‌ಫಿಲ್ಮ್ಸ್, ಊಟದ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ, ಥರ್ಮೋಕೋಲ್, ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್‌ನಿಂದ ತಯಾರಾದ ವಸ್ತುಗಳು, ನಾನ್‌ವೋವೆನ್, ಪಾಲಿಪ್ರಾಪಿಲೆನ್‌ನಂತಹ ಪ್ಲಾಸ್ಟಿಕ್ ವಸ್ತುಗಳನ್ನು ಬಳಸದಂತೆ ಮನವಿ ಮಾಡಿದರು.

ಸಭೆಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಜಿಲ್ಲಾ ಪರಿಸರ ಅಧಿಕಾರಿ ಭೀಮಸಿಂಗ್ ಗೌಗಿ, ಉಪ ಪರಿಸರ ಅಧಿಕಾರಿ ರಮೇಶ್ ಬಿ., ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ: ರಂಗಸ್ವಾಮಿ, ಡಾ: ಪುರುಷೋತ್ತಮ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

---

## ಪ್ರಗತಿ TV ಇಂದಿನ ಕಾರ್ಯಕ್ರಮಗಳು

**ಬೆಳಗ್ಗೆ**
06 : 00 – ಭಕ್ತಿ ಸುಧೆ
06 : 30 – ಜ್ಞಾನ ಸಿಂಧು
07 : 00 – ನಮ್ಮೂರ ದೇಗುಲ
07 : 30 – ಆಯುಷ್ಮಾನ್‌ಭವ
8 : 00 – ಪ್ರಗತಿ ನ್ಯೂಸ್
08 : 30 – ಬಿಗ್ ಬ್ಯಾಂಗ್ ಬೂಮ್
09 : 00 – ಕಾಲ್ ಮಾಡಿ ವಿಶ್ ಮಾಡಿ
10 : 00 – ಬಾಲ ದುಡಿಮೆ
11: 00 – ಆಯುಷ್ಮಾನ್‌ಭವ
11 : 30– ಲೇಡಿಸ್ ಹ್ಯಾಂಗ್‌ಔಟ್
12 : 30 – ಅದ್ಭುತ ಪ್ರಪಂಚದಲ್ಲಿ ಒಂದು ಸುತ್ತು

**ಮಧ್ಯಾಹ್ನ**
01 : 00 – ಪ್ರಗತಿ ನ್ಯೂಸ್
01: 30 – ಫ್ಲಾಲೆಸ್
02:00 – ಜಬರ್‌ದಸ್ತ್ ಕಾಮಿಡಿ
03:00 – ಪುಟಾಣಿ ಕಲರವ
04 : 00 – ಸವಿ ಸವಿ ನೆನಪು
04:30 – ಕಿರಿಕ್ ಪಾರ್ಟಿ

**ಸಂಜೆ**
05 : 00 – ಪ್ರಗತಿ ನ್ಯೂಸ್
05 : 30 – ಹಾಯ್ ಫೋಟು
06 : 00 – ಜಸ್ಟ್ ಮಾತ್ ಮಾತಲ್ಲಿ
07 :00 –ನೀರು,,ನೀರು,,ನೀರು,,

**ರಾತ್ರಿ**
08 : 00 – ಪ್ರಗತಿ ನ್ಯೂಸ್
09 : 00 – ಅದ್ಭುತ ಪ್ರಪಂಚದಲ್ಲಿ ಒಂದು ಸುತ್ತು
09:30 – ಫ್ಲಾಲೆಸ್
10 : 00 – ಪ್ರಗತಿ ನ್ಯೂಸ್
11 : 00 – ಪ್ರಗತಿ ಟಾಕೀಸ್

### ಚಾನಲ್ ಮಾಹಿತಿ : ಕೇಬಲ್ ಹೊಂದಿರುವವರು

**ಡಿಜಿಟಲ್ ಬಾಕ್ಸ್‌ನಲ್ಲಿ 482 ಹಾಗೂ ಅನಲಾಗ್‌ನಲ್ಲಿ 20 ಹಾಗೂ 23 ರಲ್ಲಿ ಟ್ಯೂನ್ ಮಾಡಿಕೊಳ್ಳುವುದು. ವಿವರಗಳಿಗೆ ಸಮೀಪದ ಕೇಬಲ್ ಆಪರೇಟರ್‌ಗಳನ್ನು ಸಂಪರ್ಕಿಸಿ.**

---

# ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಹಯಾಸ್ತ ನೀಡಿ ಗುರು ಸೇವೆ ಸ್ಮರಿಸಿದ ಶಿಷ್ಯ

**ಕುಣಿಗಲ್**

ದೇಶಸೇವೆ, ತಾಯಿಸೇವೆ ಎರಡೂ ಒಂದೇ ಎಂದು ಭಾವಿಸಿ ವಿವಿಧ ಕ್ಷೇತ್ರದಲ್ಲಿ ಗುರುತಿಸಿಕೊಂಡು ಸೇವೆ ಮಾಡಿದ ದಿ|| ಖ್ಯಾತ ವಕೀಲ ಸುಬ್ರಹ್ಮಣ್ಯಸ್ವಾಮಿ ಎಂಬುವ ತನ್ನ ಗುರುಗಳ, ನೆನಪಾರ್ಥವಾಗಿ ಅವರ ಶಿಷ್ಯ ಖ್ಯಾತ ವಕೀಲ ಎಸ್.ಕೆ.ವೆಂಕಟರೆಡ್ಡಿ ಅವರು, ಗುರುಗಳ ಹೆಸರಿನಲ್ಲಿ ಸುಬ್ರಹ್ಮಣ್ಯಸ್ವಾಮಿ ಅಡ್ವೋಕೇಟ್ ಮೆಮೋರಿಯಲ್ ಟ್ರಸ್ಟ್ ಎಂಬ ಸಂಸ್ಥೆ ಕಟ್ಟಿ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಧನಸಹಾಯ ಮಾಡುವ ಮೂಲಕ ನಾಗರಿಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ತನ್ನ ಗುರುಗಳ ಕೊಡುಗೆ ಹಾಗೂ ಸಾಧನೆಯಯನ್ನು ಸ್ಮರಿಸಲು ಮಂಗಳವಾರ ಪಟ್ಟಣದ ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ನಡೆದ ವಿದ್ಯಾರ್ಥಿವೇತನ ವಿತರಣಾ ಸಮಾರಂಭದಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿ ಅಡ್ವೋಕೇಟ್ ಮೆಮೋರಿಯಲ್ ಟ್ರಸ್ಟ್ ವತಿಯಿಂದ ಟ್ರಸ್ಟ್‌ನ ಸಂಸ್ಥಾಪಕ ಟ್ರಸ್ಟಿಯಾದ ಖ್ಯಾತವಕೀಲ ಎಸ್.ಕೆ.ವೆಂಕಟರೆಡ್ಡಿ ಅವರು 2017–18ನೇ ಸಾಲಿನ 5 ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಲು ತಲಾ 5 ಸಾವಿರ ರೂ.ಗಳ ವಿದ್ಯಾರ್ಥಿವೇತನವನ್ನ ಟ್ರಸ್ಟ್‌ನ ಪದಾಧಿಕಾರಿಗಳ ಕಡೆ ಕಳುಹಿಸಿ ಕೊಡುವ ಮೂಲಕ ವಿದ್ಯಾರ್ಥಿಗಳಿಗೆ ಶುಭಕೋರಿದ್ದಾರೆ.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದ ಹಿರಿಯ ವಕೀಲ ಬಿ.ಜಿ.ರಾಮಚಂದ್ರಪ್ರಸಾದ್ ಈ ಇಬ್ಬರು ಗುರು–ಶಿಷ್ಯರ ಸಾಧನೆ ಮಹತ್ವದ್ದಾಗಿದ್ದು ಪ್ರಸ್ತುತ ಸಮಾಜಕ್ಕೆ ಇವರ ಕೊಡುಗೆ ಅಗತ್ಯವಾಗಿದ್ದು ಮುಂದೆ ಸಂಸ್ಥಾಪಕರಾದ ವೆಂಕಟರೆಡ್ಡಿಯವರ ಅನುಮತಿಯ ಮೇರೆಗೆ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಟ್ರಸ್ಟ್‌ನ ವತಿಯಿಂದ ವಿವಿಧ ರೀತಿಯ ನೆರವು ನೀಡುವ ಚಿಂತನೆಯನ್ನು ಮಾಡುವುದಾಗಿಯೂ ತಿಳಿಸಿದರು.

ಕೆ.ವಿ.ಎಸ್. ಎಂದೇ ಹೆಸರಾದ ದಿ.ಸುಬ್ರಹ್ಮಣ್ಯಸ್ವಾಮಿ ಅವರು ವಕೀಲರಾಗಿ ವೃತ್ತಿಯನ್ನು ಪ್ರಾರಂಭಿಸಿ, ವಕೀಲ ಸಂಘಕ್ಕೆ ಮೊದಲ ಅಧ್ಯಕ್ಷರಾಗಿ ಹಾಗೂ ಕುಣಿಗಲ್ ಪುರಸಭಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ನಂತರ ತುಮಕೂರಿನಲ್ಲಿ ವಕೀಲ ವೃತ್ತಿ ಮುಂದುವರಿಸಿಕೊಂಡು ಕಾನೂನು ಕಾಲೇಜಿನ ಅವಶ್ಯಕತೆಯನ್ನು ಮನಗೊಂಡು ವಿದ್ಯೋದಯ ಕಾನೂನು ಕಾಲೇಜನ್ನು ಸ್ಥಾಪಿಸಿ, ಸಂಸ್ಥಾಪಕ ಪ್ರಾಂಶುಪಾಲರಾಗಿ ಮೈಸೂರು ವಿಶ್ವವಿದ್ಯಾನಿಲಯದ ಡೀನ್‌ಆಗಿ ಉತ್ತಮ ಸೇವೆ ನೀಡುವ ಮೂಲಕ ಅಪಾರ ವಿದ್ಯಾರ್ಥಿಬಳಗವನ್ನು ಹುಟ್ಟಾಕಿ ಸಾವಿರಾರು ವಿದ್ಯಾರ್ಥಿಗಳ ಮೆಚ್ಚಿಗೆಯ ಗುರುಗಳಾಗಿದ್ದ ಇವರು, ಆರ್.ಎಸ್.ಎಸ್.ನಲ್ಲಿ ಸಕ್ರಿಯ ಕಾರ್ಯಕರ್ತರಾಗಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಹಲವು ತಿಂಗಳು ಜೈಲುವಾಸವನ್ನು ಅನುಭವಿಸಿದ್ದ ಇವರು, ಸ್ವಾತಂತ್ರ್ಯ ಹೋರಾಟಗಾರರಿಗೆ ಸರ್ಕಾರ ಕೊಡುವ ಪಿಂಚಣಿಯನ್ನು ನಿರಾಕರಿಸಿದ ಸ್ವಾಭಿಮಾನಿಯಾಗಿದ್ದ ಇವರು 1992ರಲ್ಲಿ ನಿಧನ ಹೊಂದಿದರು ಎಂದು ಈ ಸಂದರ್ಭದಲ್ಲಿ, ಕೆ.ವಿ.ಎಸ್. ಅವರನ್ನ ವಕೀಲ ರಾಮಚಂದ್ರಪ್ರಸಾದ್ ಸ್ಮರಿಸಿದರು.

ಟ್ರಸ್ಟ್‌ನ ಅಧ್ಯಕ್ಷರಾದ ಹಿರಿಯ ವಕೀಲ ಬಿ.ಕೆ. ವೆಂಕಟಕೃಷ್ಣರಾವ್ ಮಾತನಾಡಿ ದಿ|| ಕೆ.ವಿ.ಎಸ್. ಅವರ ಸಾಧನೆ ಮಹತ್ವದ್ದಾಗಿದ್ದು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಇಂತಹವರ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸಮಾಜಕ್ಕೆ ಕೊಡುಗೆ ನೀಡುವ ಮನಸನ್ನು ಬೆಳೆಸಿಕೊಳ್ಳುವ ಮೂಲಕ ದೇಶ ಸೇವೆಗೆ ಮುಂದಾಗಬೇಕೆಂದು ಕರೆನೀಡಿದರು. ಸಮಾರಂಭದಲ್ಲಿ ಉಪಾಧ್ಯಾಯ ಸ್ವಾಗತಿಸಿದರು. ಮಾಜಿ ಪುರಸಭಾ ಸದಸ್ಯ ಶಂಕರ್, ಧನಸಹಾಯ ಪಡೆದ ವಿದ್ಯಾರ್ಥಿಗಳಾದ ಗಿರೀಶ್, ಶ್ರೀಲಕ್ಷ್ಮಿ, ವೈಷ್ಣವಿನಾಡಿಗ್, ಅನನ್ಯ ಭಾಗವಹಿದ್ದರು.

---

# ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರಿಗೆ ಧಮ್ಕಿ

**ತೋವಿನಕೆರೆ**

ಗ್ರಾಮ ಪಂಚಾಯ್ತಿ ಅಧ್ಯಕ್ಷರ ಸಂಬಂಧಿಯೊಬ್ಬ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಿಗೆ ಧಮ್ಕಿ ಹಾಕಿರುವ ಘಟನೆ ಕೊರಟಗೆರೆ ತಾಲ್ಲೂಕು ತೋವಿನಕೆರೆಯಲ್ಲಿ ನಡೆದಿದೆ.

ಗ್ರಾಮಪಂಚಾಯ್ತಿ ಅಧ್ಯಕ್ಷರಸಂಬಂಧಿಯೊಬ್ಬ ಖಾಸಗಿ ಒಡೆತನದ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದು, ಸರ್ಕಾರಿ ಪ್ರೌಢಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯರಿಗೆ ಕೆಲವು ಮಕ್ಕಳನ್ನು ಖಾಸಗಿ ಶಾಲೆಗೆ ವರ್ಗಾವಣೆ ಮಾಡಿಕೊಳ್ಳಲು, ವರ್ಗಾವಣಾ ಪತ್ರ ನೀಡುವಂತೆ ಒತ್ತಾಯಿಸಿ ಧಮ್ಕಿ ಹಾಕಿರುವ ಘಟನೆ ನಡೆದಿದೆ. ಇನ್ನೂ ಈ ಘಟನೆ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ತೋವಿನಕೆರೆ ಗ್ರಾಮದಲ್ಲಿ ನಡೆದಿದ್ದು, ರಾಜಕೀಯದ ಬಲದಿಂದಾಗಿ ಇಂತಹ ಪ್ರಬಲರಿಂದ ಸರ್ಕಾರಿ ಶಾಲೆಗಳನ್ನು ಹಾಳು ಮಾಡುವ ಕೆಲಸ ನಡೆಯುತ್ತಲೇ ಇದೆ. ಇತ್ತ ಕೆಲ ಅಧಿಕಾರಿಗಳು ಸಹ ಖಾಸಗಿ ಒಡೆತನ ಶಾಲೆಗಳಿಗೆ ಬೆಂಬಲ ನೀಡುತ್ತಿರುವುದು ಇಲ್ಲಿನ ಸರ್ಕಾರಿ ಶಾಲೆಯ ಅಧೋಗತಿಗೆ ಕಾರಣವಾಗುವ ಲಕ್ಷಣಗಳು ಕಾಣಸಿಗುತ್ತವೆ.

ಸರ್ಕಾರಿ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ ಇಲ್ಲಿನ ಖಾಸಗಿ ಶಾಲೆಗಳಾದ ಜ್ಯೋತಿ ವಿದ್ಯಾಸಂಸ್ಥೆ ಮತ್ತು ಗಂಗಾಧರೇಶ್ವರ ವಿದ್ಯಾಸಂಸ್ಥೆಯ ಅಧಿಕಾರಿಗಳು ನಮ್ಮ ಮಕ್ಕಳಿಗೆ ಇಲ್ಲ ಸಲ್ಲದ್ದನ್ನು ಹೇಳಿ ಅವರ ಶಾಲೆಗೆ ಕರೆದೊಯ್ಯುವ ಕೆಲಸ ಮಾಡುತ್ತಿದ್ದಾರೆ ಹಾಗೂ ಈ ಭಾಗಕ್ಕೆ ಮಂಜೂರಾಗಿದ್ದ ಸರ್ಕಾರಿ ಆಂಗ್ಲಮಾಧ್ಯಮ ಪ್ರೌಢಶಾಲೆಯನ್ನು ಇಲ್ಲಿಗೆ ಬರದಂತೆ ಅಧಿಕಾರಿಗಳನ್ನೂ ಶಾಮೀಲು ಮಾಡಿಕೊಂಡು ಸರ್ಕಾರಿ ಶಾಲೆಯನ್ನು ಹಾಳು ಮಾಡುವ ಯತ್ನ ನಡೆಸುತ್ತಿದ್ದಾರೆ. ಇಲ್ಲಿನ ಮಕ್ಕಳ ಸಂಖ್ಯೆ ಕಡಿಮೆಯಾದರೆ ಸರ್ಕಾರಿ ಪ್ರೌಢಶಾಲೆ ಬರುವುದಿಲ್ಲ ಎನ್ನುವ ನಿಟ್ಟಿನಲ್ಲಿ ಈ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.

> **ಖಾಸಗಿ ಶಾಲೆಗಳಾದ ಜ್ಯೋತಿ ವಿದ್ಯಾಸಂಸ್ಥೆ ಮತ್ತು ಗಂಗಾಧರೇಶ್ವರ ವಿದ್ಯಾಸಂಸ್ಥೆಯ ಅಧಿಕಾರಿಗಳು ನಮ್ಮ ಮಕ್ಕಳಿಗೆ ಇಲ್ಲ ಸಲ್ಲದ್ದನ್ನು ಹೇಳಿ ಅವರ ಶಾಲೆಗೆ ಕರೆದೊಯ್ಯುವ ಕೆಲಸ ಮಾಡುತ್ತಿದ್ದಾರೆ ಹಾಗೂ ಈ ಭಾಗಕ್ಕೆ ಮಂಜೂರಾಗಿದ್ದ ಸರ್ಕಾರಿ ಆಂಗ್ಲಮಾಧ್ಯಮ ಪ್ರೌಢಶಾಲೆಯನ್ನು ಇಲ್ಲಿಗೆ ಬರದಂತೆ ಅಧಿಕಾರಿಗಳನ್ನೂ ಶಾಮೀಲು ಮಾಡಿಕೊಂಡು ಸರ್ಕಾರಿ ಶಾಲೆಯನ್ನು ಹಾಳು ಮಾಡುವ ಯತ್ನ ನಡೆಸುತ್ತಿದ್ದಾರೆ. ಇಲ್ಲಿನ ಮಕ್ಕಳ ಸಂಖ್ಯೆ ಕಡಿಮೆಯಾದರೆ ಸರ್ಕಾರಿ ಪ್ರೌಢಶಾಲೆ ಬರುವುದಿಲ್ಲ ಎನ್ನುವ ನಿಟ್ಟಿನಲ್ಲಿ ಈ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.**

ಮಕ್ಕಳ ಪೋಷಕರಾದ ಮಾತನಾಡಿ ಸರ್ಕಾರಿ ಶಾಲೆಗಳ ಅಭಿವೃದ್ಧಿಪಡಿಸಬೇಕಾದವರು ಇಂದು ಸರ್ಕಾರಿ ಶಾಲೆಯನ್ನು ಹಾಳು ಮಾಡಲು ಹೊರಟಿದ್ದಾರೆ. ಮಕ್ಕಳನ್ನು ನಮ್ಮ ಶಾಲೆಗೆ ಬನ್ನಿ ಎಂದು ಬೆಂಬಿದ್ದಿರುವುದು ಸರಿಯಾದ ಕೆಲಸವಲ್ಲ, ಈ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ಇನ್ನೂ ವಿದ್ಯಾರ್ಥಿಗಳಿಗು ಸಹ ಖಾಸಗಿ ಶಾಲೆಯ ಆಡಳಿತ ಮಂಡಳಿಯವರು ಆಮಿಷವೊಡ್ಡಿ, ನಿಮಗೆ ಎಸ್‌ಎಸ್‌ಎಲ್‌ಸಿಯಲ್ಲಿ ಮಾರ್ಕ್ಸ್ ಬರುವಂತೆ ಹೇಳಿಕೊಟ್ಟು ಪಾಸ್ ಮಾಡುಸ್ತೀವಿ,, ನಿಮ್ಗೆ ಎಲ್ಲಾ ಸೌಲಭ್ಯಗಳನ್ನೂ ಫ್ರೀ ಕೊಡ್ತೀವಿ ಅಂತಾ ಇಲ್ಲ ಸಲ್ಲದ ಆಮಿಷಗಳನ್ನ ಒಡ್ಡುತ್ತಾರಂತೆ.

ಒಟ್ಟಾರೆ ಗೃಹ ಸಚಿವರ ತವರು ಕ್ಷೇತ್ರದಲ್ಲೆ ಈ ರೀತಿ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರ ಮೇಲೆ ಧಮ್ಕಿ ಪ್ರಕರಣ ನಡೆಯುತ್ತಿದ್ದು, ಇದೇ ರೀತಿ ಮುಂದುವರೆದರೆ ಸರ್ಕಾರಿ ಶಾಲೆಗಳು ಮುಚ್ಚುವ ಪರಿಸ್ಥಿತಿ ಎದುರಾಗುವುದರಲ್ಲಿ ಯಾವುದೇ ಸಂದೇಹವಿಲ್ಲ, ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗಳ ಬಗ್ಗೆ ಗಮನ ಹರಿಸಿ ಸರ್ಕಾರಿ ಶಾಲೆಗಳನ್ನು ಉಳಿಸಲು ಮುಂದಾಗ್ತಾರ ಅಂತಾ ಕಾದು ನೋಡಬೇಕಿದೆ..

---

# ಹುಂಡಿ ಹಣ ಕಳವು

**ಚಿಕ್ಕನಾಯಕನಹಳ್ಳಿ:** ದೇವಾಲಯದಲ್ಲಿ ಹುಂಡಿಯನ್ನು ಕಳುವು ಮಾಡಿ ಹಣವನ್ನೆಲ್ಲ ದೋಚಿ ಸುಮಾರು 2ಕಿ.ಮೀ ದೂರದಲ್ಲಿ ಹುಂಡಿಯನ್ನು ಎಸೆದು ಹೋಗಿರುವ ಘಟನೆ ತಾಲ್ಲೂಕಿನ ಹಂದನಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲ್ಲೂಕಿನ ಹಂದನಕೆರೆ ಹೋಬಳಿಯ ಮತಿಘಟ್ಟ ಗ್ರಾಮದಲ್ಲಿನ ಶ್ರೀಪಾರ್ವತಮ್ಮ ದೇವಾಲಯದಲ್ಲಿ ಕಳೆದರಾತ್ರಿ ಕಳ್ಳರು ದೇವಾಲಯದ ಮುಂಭಾಗದಲ್ಲಿಟ್ಟಿದ್ದ ದೇವರ ಹುಂಡಿಯನ್ನು ಕಳ್ಳತನಮಾಡಿಕೊಂಡು ತೆಗೆದುಕೊಂಡು ಹೋಗಿ ಅದನ್ನು ಚನ್ನಪ್ಪನ ಪಾಳ್ಯದ ಹತ್ತಿರ ಎಸೆದುಹೋಗಿದ್ದಾರೆ. ಹುಂಡಿಯಲ್ಲಿ ಸುಮಾರು 5 ಸಾವಿರ ಹಣವಿರಬಹುದು ಎಂದು ಅಂದಾಜಿಸಲಾಗಿದ್ದು ಪ್ರಕರಣ ಹಂದನಕೆರೆ ಠಾಣೆಯಲ್ಲಿ ದಾಖಲಾಗಿದೆ.

---

# ಹೆಣ್ಣು ಮಗುವನ್ನು ತಿಪ್ಪೆಗೆ ಹಾಕಿದ ಅಮಾನವೀಯ ಘಟನೆ

**ಚಿಕ್ಕನಾಯಕನಹಳ್ಳಿ**

ಏಳು ತಿಂಗಳ ಹೆಣ್ಣು ಮಗುವನ್ನು ತಿಪ್ಪೆಯಲ್ಲಿ ಬಿಸಾಡಿ ಹೋಗಿರುವ ಅಮಾನವೀಯ ಘಟನೆ ಪಟ್ಟಣದ ಮಣಿಧೀರನಹಟ್ಟಿಯಲ್ಲಿ ನಡೆದಿದೆ.

ಜಗತ್ತನ್ನೇ ನೋಡದ ಪುಟ್ಟ ಮಗುವನ್ನು ಪೋಷಕರು ತಿಪ್ಪೆಯಲ್ಲಿ ಎಸೆದು ಹೋಗಿದ್ದು ಮಗು ಉಸಿರುಗಟ್ಟಿ ಸ್ಥಳದಲ್ಲೇ ಸಾವನ್ನಪ್ಪಿದೆ. ಸ್ಥಳಕ್ಕೆ ಆರೋಗ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಹೆಣ್ಣು ಮಕ್ಕಳ ರಕ್ಷಣೆಗಾಗಿ ಸರ್ಕಾರ ಎಷ್ಟೇ ಯೋಜನೆ ಪ್ರಕಟಿಸಿದರೂ ಈ ರೀತಿ ಮಗುವನ್ನು ಬಿಸಾಕಿ ಹೋಗಿರುವುದು ಸಾರ್ವಜನಿಕ ಆಕ್ರೋಶಕ್ಕೆ ಕಾರಣವಾಗಿದ್ದು ಎಸೆದು ಹೋದ ನಿರ್ಲಕ್ಷ್ಯ ತಾಯಿಗೆ ಹಿಡಿ ಹಿಡಿ ಶಾಪ ಹಾಕುತ್ತಿದ್ದಾರೆ.

ತಾಯಂದಿರ ದಿನವಾದ ಮಂಗಳವಾರ ಇಂತಹ ಘಟನೆ ನಡೆದಿರುವುದು ದುರದೃಷ್ಟಕರ ಎಂದು ಪುರಸಭಾಧ್ಯಕ್ಷ ಸಿ.ಡಿ.ಚಂದ್ರಶೇಖರ್ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಸ್ಥಳಕ್ಕೆ ಪುರಸಭಾ ಸದಸ್ಯರಾದ ಕೆ.ಜಿ.ಕೃಷ್ಣೆಗೌಡ, ಶಿವಕುಮಾರ್, ಸಿಡಿಪಿಓ ತಿಪ್ಪಯ್ಯ, ವೈದ್ಯಾಧಿಕಾರಿ ಪ್ರೇಮಕುಮಾರಿ ಭೇಟಿ ನೀಡಿದ್ದರು.

---

# ಏಳುಮಂದಿ ಅಮ್ಮನವರ ಮತ್ತು ಸಿದ್ದೇಶ್ವರ ಸ್ವಾಮಿ ಜಾತ್ರೆ ವಿಜೃಂಭಣೆಯಿಂದ ಆಚರಣೆ

**ಮಿಡಿಗೇಶಿ**

ಜೂನ್ 11 ಕಳೆದ ಇಪ್ಪತ್ನಾಲ್ಕು ವರ್ಷಗಳ ಹಿಂದೆ ಆಂಧ್ರರಾಜ್ಯ ಹಾಗೂ ಕರ್ನಾಟಕ ರಾಜ್ಯಕ್ಕೆ ಸೇರಿದ ಐದು ಬುಡಕಟ್ಟಿನ ಹಾಲುಮತದ (ಕುರುಬ) ಒಮ್ಮತದ ಒಗ್ಗಟ್ಟಿನಿಂದ ರಾಜಗಿರಿ ದೈವಗೋತ್ರದ ವಂಶಸ್ಥರಾದ ದೈವಗೋತ್ರ ಧರ್ಮಮ್ಮ ಏಳುಮಂದಿ ಅಮ್ಮನವರ ಮತ್ತು ಸಿದ್ದೇಶ್ವರಸ್ವಾಮಿ ದೇವರುಗಳಿಗೆ ಈವರ್ಷ ಜೂನ್ 11 ರಿಂದ ಜೂನ್ 15ನೇ ತಾರೀಕಿನವರೆಗೆ ವಿವಿಧ ದೇವತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ಅದರಲ್ಲೂ ವಿಶೇಷ ಹಾಗೂ ಅತಿ ಹೆಚ್ಚಿನ ಭಕ್ತರು ಒಂದೆಡೆ ಮಧುಗಿರಿ ತಾಲ್ಲೂಕಿನ ಕೊಡಿಗೇನಹಳ್ಳಿ ಜಯಮಂಗಲಿ ನದಿಯಲ್ಲಿ ಸೇರ್ಪಡೆ, ಜೂನ್ 11 ರಂದು ಪುಣ್ಯಾಹ ಶ್ರೀ ಸಿದ್ದೇಶ್ವರ ಸ್ವಾಮಿಗೆ ಅಭಿಷೇಕ, ಮಹಾಮಂಗಳಾರತಿ ಗದ್ದಿಗೆ ಮಾಡುವುದು ಹಾಗೂ ರಾತ್ರಿ ನಾಟಕ ಕಾರ್ಯಕ್ರಮ, ಜೂನ್ 12 ರ ಸೋಮವಾರ ಮುಂಜಾನೆ 5 ಗಂಟೆಗೆ ಮೇಷಲಗ್ನದಲ್ಲಿ ಪುಣ್ಯಾಹ, ಗಂಗಾ ಪೂಜೆ, ಬೆಳಿಗ್ಗೆ 7–30 ರಿಂದ 8–00 ಗಂಟೆಗೆ ದೇವರ ಗದ್ದಿಗೆ ನೂರೊಂದು ಎಡೆ ಮಾಡುವುದು ನಂತರ ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ವೀರಗಾಸೆ ಕುಣಿತ ಅತಿ ಮುಖ್ಯವಾಗಿ ಗೊರವರ ಕುಣಿತ, ಬಂಧುಬಾಂಧವರಿಗೆ ನವವಸ್ತ್ರ ಪರಸ್ಪರ ನೀಡುವುದು, ಸಂಜೆ ನಾಲ್ಕು ಗಂಟೆಗೆ ಪಟ್ಟಾಭಿಷೇಕ ಕಾರ್ಯಕ್ರಮ ನೆರವೇರಿಸಲಾಯಿತು. ಜೂನ್ 13 ರಂದು ರುದ್ರ ಪಾದಕ್ಕೆ ಹರಕೆ ಹೊಯ್ಯುವ ಕಾರ್ಯ, ಗೊರವರಿಗೆ ಹಾಲು ಹೊಯ್ಯುವ ಕಾರ್ಯ, ಜೂನ್ 14 ರಂದು ಹೆಣ್ಣು ಮಕ್ಕಳಿಗೆ ಹರಿಸಿನ–ಕುಂಕುಮ ಕೊಡುವುದು ಬುಡಕಟ್ಟಿನವರಿಗೆ ವಸ್ತ್ರ ನೀಡುವುದು, ಧರ್ಮದೇವತಾಕಾರ್ಯ ಜೂನ್ 15 ರಂದು ವಸಂತೋತ್ಸವ ಬಂಡಾರ ಆಡುವುದು ದೇವತಾ ಸೇವೆ ಮುಗಿದನಂತರ ಆಯಾ ಅಮಾವಾಸೆ ಮನೆಯವರು ತಮ್ಮ ತಮ್ಮ ಸಿಂಹಾಸನದೊಂದಿಗೆ ಸ್ವಸ್ಥಳಕ್ಕೆ ಪ್ರಯಾಣ ಬೆಳೆಸುವುದಾಗಿರುತ್ತದೆ.

ಜೂನ್ 10 ರಂದು ಬೆಳಗ್ಗೆ ಮಾನ್ಯ ಶಾಸಕರಾದ ಕೆ.ಎನ್.ರಾಜಣ್ಣನವರು ಏಳುಮಂದಿ ಅಮ್ಮನವರಿಗೆ ಹಾಗೂ ಸಿದ್ದೇಶ್ವರ ಸ್ವಾಮಿದೇವರುಗಳಿಗೆ ವಿಶೇಷ ಪೂಜೆ ಸಲ್ಲಿಸಿದರು.

ಈ ಮೇಲ್ಕಂಡ ದೇವತಾ ಕಾರ್ಯಕ್ರಮದಲ್ಲಿ ಎಂಟತ್ತುಸಾವಿರ ಭಕ್ತಮಹಾಶಯರು ಪಾಲ್ಗೊಂಡಿದ್ದರು. ಭಕ್ತಾದಿಗಳು, ಗಾಮಸ್ಥರು, ಎಲ್ಲಾ ಸ್ಥಳೀಯರ ಸಂಸ್ಥೆಗಳ ಹಾಲಿ ಮತ್ತು ಮಾಜಿ ಪಾದಾಧಿಕಾರಿಗಳು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಯಜಮಾನರು ಗೌಡರು ಅರ್ಚಕರು ವ್ಯವಸ್ಥಾಪಕರು ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿಸಲಾಯಿತು.

---

# ಜನಪ್ರತಿನಿಧಿಗಳ ಸ್ವಪ್ರತಿಷ್ಠೆಯಿಂದಾಗಿ ಕಾಮಗಾರಿ ಆಮೆಗತಿ

## ಸ್ಥಗಿತಗೊಂಡ ಹೇಮಾವತಿ ಕಾಮಗಾರಿ : ಸ್ಥಳೀಯರ ಆಕ್ರೋಶ

**ಚಿಕ್ಕನಾಯಕನಹಳ್ಳಿ**

ಸ್ಥಳೀಯ ಶಾಸಕರು–ಮಾಜಿ ಶಾಸಕರ ನಿರ್ಲಕ್ಷ್ಯ, ರಾಜಕೀಯ ನಾಯಕರ ಜನಪ್ರತಿನಿಧಿಗಳ ಸ್ವಪ್ರತಿಷ್ಠೆಯಿಂದಾಗಿ ಸಾಸಲು ಭಾಗದ ಹೇಮಾವತಿ ಕಾಮಗಾರಿ ಸ್ಥಗಿತಗೊಂಡಿದೆ. ಅಲ್ಲದೆ 7 ವರ್ಷದಿಂದ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿದೆ, ಕಾಮಗಾರಿ ಪುನಃ ಪ್ರಾರಂಭಿಸಲು ಒಂದು ತಿಂಗಳ ಕಾಲಾವಕಾಶ ನೀಡಲಾಗುವುದು, ಇಲ್ಲವಾದರೆ ತಾಲ್ಲೂಕು ಕಚೇರಿ ಮುಂದೆ ಒಂಟಿ ಕಾಲಿನಲ್ಲಿ ನಿಂತು ಪ್ರತಿಭಟನೆ ಮಾಡಲಾಗುವುದು ಎಂದು ನೀರಾವರಿ ಹೋರಾಟಗಾರ ಅಜ್ಜೇನಹಳ್ಳಿ ಶರತ್ ಕುಮಾರ್ ಹೇಳಿದರು.

ತಾಲ್ಲೂಕಿನ ಗ್ಯಾರೆಹಳ್ಳಿ–ಸಾಸಲು–ಪೆಮ್ಮಲದೇವರಹಳ್ಳಿ ಭಾಗದಲ್ಲಿ ಸ್ಥಗಿತಗೊಂಡಿರುವ ಹೇಮಾವತಿ ಕಾಮಗಾರಿಯನ್ನು ಆ ಭಾಗದ ರೈತರೊಂದಿಗೆ ವೀಕ್ಷಣೆ ಮಾಡಿ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 2010ರಲ್ಲಿ ಸಾಸಲು ಪೆಮ್ಮಲದೇವರಹಳ್ಳಿ ಕೆರೆಗೆ ನೀರು ಹರಿಯುತ್ತದೆ ಎಂದು ನೀರಾವರಿ ತಜ್ಞ ಪರಮಶಿವಯ್ಯನವರು ನಡೆಸಿದ ಸರ್ವೆ ನಂತರ ಇಲ್ಲಿಯವರೆಗೆ ಕಾಮಗಾರಿ ಆರಂಭವಾಗಿ ಏಳು ವರ್ಷವಾಗಿದೆ. ಆದರೂ ಹೇಮಾವತಿ ಕಾಮಗಾರಿ ಪೂರ್ಣಗೊಂಡಿಲ್ಲ, ಸ್ಥಗಿತವಾಗುತ್ತಿದೆ, ಇಲ್ಲವಾದರೆ ಮಂದಗತಿಯಲ್ಲಿ ಸಾಗುತ್ತಿದೆ. ಇದರಿಂದ ತಾಲ್ಲೂಕಿನ ಜನತೆ ನೀರಿಗಾಗಿ ಹೋರಾಟ ಮಾಡುವುದು ತಪ್ಪುತ್ತಿಲ್ಲ, ಇತ್ತ ಜನಪ್ರತಿನಿಧಿಗಳು, ಅಧಿಕಾರಿ ವರ್ಗದವರು ಶೀಘ್ರ ಕಾಮಗಾರಿ ಪೂರ್ಣಗೊಳಿಸಬೇಕೆಂಬ ಉದ್ದೇಶವನ್ನು ಹೊಂದಿಲ್ಲ, ಈಗಲಾದರೂ ಕಾವೇರಿ ನೀರಾವರಿ ನಿಗಮದವರಾಗಲಿ, ಜಿಲ್ಲಾಧಿಕಾರಿ, ತಹಸೀಲ್ದಾರ್ ಅಥವಾ ಶಾಸಕರು, ಜನಪ್ರತಿನಿಧಿಗಳು ಎಚ್ಚೆತ್ತುಕೊಂಡು ತಮ್ಮ ಜವಾಬ್ದಾರಿ ನಿರ್ವಹಿಸಿ ತಾಲ್ಲೂಕಿಗೆ ನೀರನ್ನು ಹರಿಸಬೇಕು, ತಾಲ್ಲೂಕಿನ ಅಭಿವೃದ್ಧಿಗೆ ಮುಂದಾಗಬೇಕು ಎಂದ ಅವರು, ಮೊದಲನೆಯದಾಗಿ ಸಾಂಕೇತಿಕವಾಗಿ ಗಾಂಧಿಗಿರಿಯಲ್ಲಿ ತಾಲ್ಲೂಕು ಕಚೇರಿ ಮುಂದೆ ಒಂಟಿ ಕಾಲಿನ ಪ್ರತಿಭಟನೆ ನಡೆಯುವುದು, ನಂತರ ಹೋರಾಟ ತೀವ್ರಗೊಳ್ಳುವುದು ಎಂದು ಎಚ್ಚರಿಸಿದ್ದಾರೆ.

ರೈತ ಮುಖಂಡ ಪಂಚಾಕ್ಷರಿ ಮಾತನಾಡಿ, ತಾಲ್ಲೂಕಿಗೆ ಹೇಮಾವತಿ ನೀರನ್ನು ಶೀಘ್ರವಾಗಿ ಹರಿಸಬೇಕು ಎಂಬ ಉದ್ದೇಶ ಯಾವ ರಾಜಕೀಯ ನಾಯಕರಿಗೂ ಇಲ್ಲ, ಇವರೆಲ್ಲರಿಗೂ ಇಚ್ಛಾಶಕ್ತಿಯ ಕೊರತೆಯಿದೆ. ಇದರಿಂದಲೇ ಕಾಮಗಾರಿ ಸ್ಥಗಿತವಾಗಿದೆ ಎಂದ ಅವರು, ಪೆಮ್ಮಲದೇವರಹಳ್ಳಿ ಕೆರೆ ಭಾಗದಲ್ಲಿ ಕಾಮಗಾರಿ ಸ್ಥಗಿತವಾಗಿ ಉಳಿದ ಮಧ್ಯದ ಭಾಗದಲ್ಲಿ ಕಾಮಗಾರಿ ನಡೆಯುತ್ತಿದೆ ಎಂದ ಅವರು, ಜಮೀನು ಬಿಟ್ಟುಕೊಟ್ಟ ರೈತರಿಗೆ ಹಣ ಬಿಡುಗಡೆಯಾಗಿದೆ ಎಂದು ಕೇವಲ ಫೇಸ್ ಬುಕ್‌ನಲ್ಲಿ ಅಪ್‌ಲೋಡ್ ಮಾಡಿರುವುದನ್ನು ನೋಡುತ್ತಿದ್ದೇವೆ. ಆದರೆ ಪರಿಹಾರದ ಹಣ ರೈತರಿಗೆ ದೊರೆತಿರುವುದು ಖಾತ್ರಿಯಾಗುತ್ತಿಲ್ಲ ಎಂದರು.

ರೈತ ಮುಖಂಡ ಸಿದ್ದರಾಜು ಮಾತನಾಡಿ, ಪೆಮ್ಮಲದೇವರಹಳ್ಳಿ ಕೆರೆಗೆ ನೀರು ಹರಿದರೆ ಸರಾಗವಾಗಿ ಬೋರನಕಣಿವೆಗೆ ನೀರು ಹರಿಯುತ್ತದೆ. ಈ ಮೂಲಕ ಹಲವು ಕೆರೆಗಳಿಗೆ ನೀರು ದೊರಕಲಿದ್ದು ಶೀಘ್ರವೇ ಸಾಸಲು ಪೆಮ್ಮಲದೇವರಹಳ್ಳಿ ಭಾಗದ ಕಾಮಗಾರಿ ಆರಂಭಿಸಿ ನೀರು ಹರಿಸುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರೈತರುಗಳಾದ ಉಮೇಶ್‌ಸಾಸಲು, ಕಾಂತರಾಜು, ಕೃಷ್ಣ ಎಸ್. ಎಂ.ಉಮೇಶ್, ಸ್ವಾಮಿ, ಮರುಳಸಿದ್ದಯ್ಯ, ಶಶಿಧರ್ ಸೇರಿದಂತೆ ಉಪಸ್ಥಿತರಿದ್ದರು.

> **ಪೆಮ್ಮಲದೇವರಹಳ್ಳಿ ಕೆರೆ ಭಾಗದಲ್ಲಿ ನಮ್ಮ ಜಮೀನಿದೆ, ನಾವು ಬಿಟ್ಟು ಕೊಡಲು ಸಿದ್ದರಿದ್ದೇವೆ. ಆದರೆ ಜಮೀನಿನ ಪರಿಶೀಲನೆಗೆ ಬಂದಿರುವವರು ನಮ್ಮ ಜಮೀನಿನಲ್ಲಿರುವ ಮರ–ಗಿಡಗಳ ಬಗ್ಗೆ ಸರಿಯಾದ ಪರಿಶೀಲನೆ ನಡಸದೆ ಪರಿಹಾರ ಕೊಡಲು ಮುಂದಾಗಿದ್ದಾರೆ. ಅಧಿಕಾರಿಗಳು ಸರಿಯಾಗಿ ಪರಿಶೀಲನೆ ನಡೆಸಬೇಕು.**
>
> ■ **ಪಟೇಲ್ ಬಸವರಾಜು.**
> **ಜಮೀನು ಮಾಲೀಕ.**